**ಸಾಕ್ಷಿಯನ್ನು ದಿಃ 24.06.2025 ರಂದು ಕರೆಸಿ ಪ್ರಮಾಣಿಕರಿಸಲಾಯಿತು.**

**ಪಾಟೀಸವಾಲುಃ ಆರೋಪಿಪರ ವಕೀಲರಾದ ಶ್ರೀ ಎಂ.ಕೆ ಅವರಿಂದಃ**

ನಾನು ಮೂಲತಃ ಪೈಯ್ಯನ್ನೂರು ಕೇರಳದವನಾಗಿರುತ್ತೇನೆ. ನಾನು ಮಂಗಳೂರಿನಲ್ಲಿ ಕಳೆದ 40 ವರ್ಷಗಳಿಂದ ಖಾಯಂ ಆಗಿ ವಾಸಿಸುತ್ತಿರುತ್ತೇನೆ. ನಾನು 1990 ರಿಂದ ಟಿಂಬರ ವ್ಯಾಪಾರ ಮಾಡುತ್ತಿದ್ದು ತದನಂತರ Bar and Restuarant ವ್ಯವಹಾರವನ್ನು ಮಾಡುತ್ತಿದ್ದೇನೆ. ನಾನು ಇಲ್ಲಿಯವರೆಗೂ ಒಂದು Bar and Restuarant ಮಾತ್ರ ವ್ಯವಹಾರವನ್ನು ಮಾಡಿರುತ್ತೇನೆ. ಸದರಿ Bar and Restuarant ನ್ನು 2016 ರಲ್ಲಿ Dolphin Bar N Restuarant ಎಂಬ ಹೆಸರಿನಲ್ಲಿ ಪ್ರಾರಂಭಿಸಿರುತ್ತೇನೆ. ನನ್ನ ಆದಾಯ ತೆರಿಗೆ ನನ್ನ ವೈಯಕ್ತಿಕ ಹೆಸರಿನಲ್ಲಿ ಮಾತ್ರ ಇರುತ್ತದೆ.

2015 ರಲ್ಲಿ ನಾನು Dolphin Restuarant ನ್ನು ಬಿಜೈ ಬಟ್ಟಗುಡ್ಡ ಜಯ ಕಿರಣ ಕಟ್ಟಡದಲ್ಲಿ ಪ್ರಾರಂಭಿಸಿರುತ್ತೇನೆ. ಜಯ ಕಿರಣ ಕಟ್ಟಡ ಮಾಲೀಕ ಆರೋಪಿ ಆಗಿರುತ್ತಾರೆ. ಸದರಿ ಕಟ್ಟಡದಲ್ಲಿ ನಾನು 2500 Sq.ft ನ್ನು basement ನಲ್ಲಿ ಪಡೆದುಕೊಂಡು ಪ್ರಾರಂಭಿಸಿರುತ್ತೇನೆ. 2015 ರಲ್ಲಿ ಸದರಿ ಕಟ್ಟಡದಲ್ಲಿ ಹೋಟೆಲ್ ನ್ನು ಪ್ರಾರಂಭಿಸಿರುತ್ತೇನೆ ಎಂದು ತೋರಿಸಲು ಬಾಡಿಗೆ ಕರಾರು ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ಬಾಡಿಗೆಯ ಕರಾರಿನ ಪ್ರಕಾರ ರೂ.10,00,000/- ಠೇವಣಿ ಮೊತ್ತವನ್ನು ನೀಡಿದ್ದು ತಿಂಗಳಿಗೆ ರೂ.10,000/- ಬಾಡಿಗೆ ಇರುತ್ತದೆ. ಸದರಿ ಕರಾರು ಯಾವ ತಿಂಗಳು ಹಾಗೂ ದಿನಾಂಕ ಆಗಿದ್ದು ಎಂದು ನನಗೆ ಈಗ ನೆನಪಿಲ್ಲ. ಸದರಿ ಕರಾರು 11 ತಿಂಗಳ ಕರಾರಾಗಿರುತ್ತದೆ. ಸದರಿ ಕರಾರು ಆದ ನಂತರ 2016 ರಲ್ಲಿ ಇನ್ನೊಂದು ಕರಾರನ್ನು ಮಾಡಿಕೊಂಡಿರುತ್ತೇವೆ. ಹೊಸ ಕರಾರಿನ ಪ್ರಕಾರ ತಿಂಗಳಿಗೆ ರೂ.14,000/- ಗಳ ಬಾಡಿಗೆ ಇತ್ತು. ಆ ನಂತರ ಆರೋಪಿಯು ಅವರ ಉದ್ದೇಶಕ್ಕೋಸ್ಕರ ರೂ.2,50,000/- ತಿಂಗಳ ಬಾಡಿಗೆಯಂತೆ ಕರಾರನ್ನು ಮಾಡಿಕೊಂಡಿರಬಹುದು. ಸದರಿ ಕರಾರು 2016 ರಲ್ಲಿ ಆಗಿರುತ್ತದೆ ಆದರೆ ನಾನು ಸ್ವಾಧೀನವನ್ನು ಪಡೆದುಕೊಂಡಿರುವುದಿಲ್ಲ. ಸದರಿ ಕರಾರಿಗೆ ನಾನು ಸಹಿ ಮಾಡಿರಬಹುದು. ನಾನು ಎಲ್ಲಾ ತಿಂಗಳ ಬಾಡಿಗೆಯನ್ನು Account Transfer ಮೂಲಕವೇ ನೀಡುತ್ತಿದ್ದೆ. ಸದರಿ ರೂ.2,50,000/- ಗಳ ಬಾಡಿಗೆಯ ಕರಾರನ್ನು ಸಂಪೂರ್ಣ ಕಟ್ಟಡದ ಬಾಬ್ತು ಮಾಡಲಾಗಿರುತ್ತದೆ. ನನ್ನ ಫಿರ್ಯಾದಿಯಲ್ಲಿ ನಮೂದಿಸಿರುವ ದಿಃ05.01.2017 ರ lease ಕರಾರನ್ನು ನಾನು ನಡೆಸುತ್ತಿದ್ದ Hotel Premises ಹಾಗೂ

This is a True Copy of the Court Records Online. Authenticated @ districts.ecourtsindia.com/cnr/KADK090010222023/truecopy/order-6.pdf

ಅದರ basement ರ ಬಾಬ್ತು ಮಾಡಿಕೊಂಡಿರುತ್ತೇನೆ. Basement ನಲ್ಲಿ Family Rooms ಮಾಡಿಕೊಂಡಿರುತ್ತೇವೆ ಅದರ ಸ್ವಾಧೀನವನ್ನು ನಾನೇ ಹೊಂದಿದ್ದೆ. ದಿಃ05.01.2017 ರ lease ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ದಿಃ05.01.2017 ರ ಕರಾರಿನ ಪ್ರಕಾರ ತಿಂಗಳಿಗೆ ರೂ.14,000/- ಬಾಡಿಗೆ ಇದ್ದು ನಾನು ಮೌಖಿಕ ಆಧಾರದ ಮೇಲೆ ರೂ.75,000/- ಗಳ ಬಾಡಿಗೆಯನ್ನು ನೀಡುತ್ತಿದ್ದೆ. ರೂ.10,000/- ಬಾಡಿಗೆಯನ್ನು ನೀಡುತ್ತಿದ್ದ ಸಮಯದಲ್ಲಿ ಯಾವುದೇ ಮೌಖಿಕ ಆಧಾರದ ಮೇಲೆ ಹೆಚ್ಚಿನ ಬಾಡಿಗೆಯನ್ನು ನೀಡುತ್ತಿರಲಿಲ್ಲ. Lease ಕರಾರು ಆದ ನಂತರ Bar ನ್ನು ಪ್ರಾರಂಭಿಸಿದ ನಂತರ ಹೆಚ್ಚಿನ ವ್ಯಾಪಾರ ಆದ ನಂತರ ರೂ.75,000/- ಗಳನ್ನು ಮೌಖಿಕ ಆಧಾರದ ಮೇಲೆ ಬಾಡಿಗೆಯನ್ನು ನೀಡುತ್ತಿದ್ದೆ. ಸದರಿ ರೂ.75,000/- ಗಳನ್ನು ಆರೋಪಿಯ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದ್ದೆ. ಸದರಿ ರೂ.75,000/- ಹೆಚ್ಚಿನ ಬಾಡಿಗೆಯನ್ನು ನಮ್ಮ ನಡುವೆ ಆದ ಮೌಖಿಕ ಒಪ್ಪಂದದ ಮೇರೆಗೆ ನೀಡುತ್ತಿದ್ದೆ.

ದಿಃ24.07.2019 ರ ವರೆಗೆ Dolphin Family Restuarant ನ್ನು ನಡೆಸಿರುತ್ತೇನೆ. ಸದರಿ Restuarant ನಾನು ಆರೋಪಿಗೆ surrender ಮಾಡಿರುವುದಿಲ್ಲ. ಸದರಿ restaurant ನ್ನು ಆರೋಪಿಯು ಯಾರಿಗೆ ನೀಡಿರುತ್ತಾರೆ ಎಂದು ನನಗೆ ಹೆಸರು ಗೊತ್ತಿಲ್ಲ ಆದರೆ ಪರಿಚಯವಿರುತ್ತಾರೆ. ಸದರಿ ಬೇರೆಯವರು ಬಲಾತ್ಕಾರದಿಂದ ನನ್ನನ್ನು Restuarant premises ನಿಂದ ಆಚೆ ಹಾಕುವವರೆಗೂ ನಾನೇ restaurant ನ್ನು ನಡೆಸುತ್ತಿದ್ದೆ. ದಿಃ24.07.2019 ರ ಎರಡು ಮೂರು ದಿವಸಗಳ ಹಿಂದೆ ನನ್ನ ಪ್ರಕಾರ ನನ್ನನ್ನು ಬಲಾತ್ಕಾರದಿಂದ ಆಚೆ ಹಾಕಿರುತ್ತಾರೆ. ನನಗೆ ಸಂಬಂಧಪಟ್ಟ ವಸ್ತುಗಳು ಎಲ್ಲಾ ಅಲ್ಲೇ ಬಿಟ್ಟಿರುತ್ತೇನೆ ಚಿಕ್ಕಪುಟ್ಟ ವಸ್ತುಗಳನ್ನು ತೆಗೆದುಕೊಂಡು ಬಂದಿರುತ್ತೇನೆ. ನನ್ನನ್ನು ಬಲಾತ್ಕಾರದಿಂದ ಆಚೆ ಹಾಕಿರುತ್ತಾರೆ ಎಂದು ಆ ಸಮಯಕ್ಕೆ ನಾನು ಯಾವುದೇ ಪೊಲೀಸ ದೂರನ್ನು ನೀಡಿರುವುದಿಲ್ಲ. ನನ್ನನ್ನು ಬಲಾತ್ಕಾರದಿಂದ ಆಚೆ ಹಾಕಿರುತ್ತಾರೆ ಎಂದು ಹೇಳುವ ಸಮಯದಲ್ಲಿ ನನ್ನ ಹಾಗೂ ಆರೋಪಿಯ ನಡುವೆ ಕರಾರು ಚಾಲ್ತಿಯಲ್ಲಿರುತ್ತದೆ. ಆಗ ಸದರಿ ಕರಾರು ಚಾಲ್ತಿಯಲ್ಲಿತ್ತು ಎಂದು ತೋರಿಸಲು ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

2016 ರ ಸಮಯದಲ್ಲಿ ನಾನೇ ಆರೋಪಿಯ ಬಳಿ ನನಗೆ ವ್ಯಾಪಾರ ಅಷ್ಟು ಆಗುವುದಿಲ್ಲ ಎಂದು restuarant ನ್ನು surrender ಮಾಡಿರುತ್ತೇನೆ. ತದನಂತರ ನಾನು restuarant ನು ಆರೋಪಿಗೆ surrender ಮಾಡಿರುವುದಿಲ್ಲ. ಸದರಿ ಜಾಗದಲ್ಲಿ Bar and restuarant ನ್ನು ಪ್ರಾರಂಭಿಸಬೇಕು ಎಂದು ಆರೋಪಿಯೇ ಸಲಹೆ ನೀಡಿರುತ್ತಾರೆ. ಜನವರಿ ಮೊದಲ ವಾರ 2016 ರಲ್ಲಿ Bar and restaurant

This is a True Copy of the Court Records Online. Authenticated @ districts.ecourtsindia.com/cnr/KADK090010222023/truecopy/order-6.pdf

ನಡೆಸಲು ಪರವಾನಗಿಗೆ ಅರ್ಜಿಯನ್ನು ಸಲ್ಲಿಸಿರಬಹುದು. ಸದರಿ ಅರ್ಜಿ ಹಾಗೂ ಇತರೆ ದಾಖಲೆಗಳಿಗೆ ಆರೋಪಿಯು ಸಹಿ ಹಾಕಿದ ನಂತರ ನಾನು ಹೋಗಿ ಸಲ್ಲಿಸಿರುತ್ತೇನೆ. ನನ್ನ ಪ್ರಕಾರ ಸದರಿ ಪರವಾನಗಿಯ ಪಡೆಯುವ ಜವಾಬ್ದಾರಿಯನ್ನು ನಾನು ವಹಿಸಿಕೊಂಡಿದ್ದೆ. ಸದರಿ ಪರವಾನಗಿಯನ್ನು ಆರೋಪಿಯ ವೈಯಕ್ತಿಕ ಹೆಸರಿನಲ್ಲಿಯೇ ಪಡೆದುಕೊಂಡಿರುತ್ತೇವೆ. Bar and restaurant ನಡೆಸಲು ಸರ್ಕಾರಕ್ಕೆ ರೂ.10,00,000/- ಶುಲ್ಕ ಕಟ್ಟಬೇಕು. ಸದರಿ ರೂ.10,00,000/- ಗಳನ್ನು ನನ್ನ ಚೆಕ್ಕಿನ ಮುಖಾಂತರ ನಾನೇ ಪಾವತಿಸಿರುತ್ತೇನೆ. ಸದರಿ ಪರವಾನಗಿಯನ್ನು ಪಡೆಯಲು ರೂ.1,00,00,000/- ಗಳನ್ನು ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ. ಸದರಿ ರೂ.1,00,00,000/- ಗಳನ್ನು ನನ್ನ ಪ್ರಕಾರ ನಗದಾಗಿ ನೀಡಿರುತ್ತೇನೆ. ಸದರಿ ರೂ.1,00,00,000/- ಗಳನ್ನು ಜನವರಿ 2016 ರಿಂದ ಮೇ 2016 ರ ತನಕ ಖರ್ಚು ಮಾಡಿರಬಹುದು. ನಾನು 2012 ರಿಂದ ನನ್ನ ಆದಾಯ ತೆರಿಗೆಯನ್ನು ಪಾವತಿಸುತ್ತಿದ್ದೇನೆ. ಸದರಿ ರೂ.1,00,00,000/- ಗಳನ್ನು ನನ್ನ ಆದಾಯ ತೆರಿಗೆಯಲ್ಲಿ ನಮೂದಿಸಿರುವುದಿಲ್ಲ. ಮಾರ್ಚ 2016 ರ ಸಮಯದಲ್ಲಿ Bar and restaurant ನ ಪರವಾನಗಿ ದೊರೆತಿರುತ್ತದೆ. Bar and restaurant ಪರವಾನಗಿ ದೊರೆತ ನಂತರ ನನ್ನ ಹಾಗೂ ಆರೋಪಿಯ ನಡುವೆ ಸದರಿ ವ್ಯವಹಾರದ ಬಾಬ್ತು ಯಾವುದೇ ಕರಾರು ಆಗಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಸದರಿ Bar and restaurant management ನ್ನು ನೋಡಿಕೊಳ್ಳುವಂತೆ ಮಾತ್ರ ಮೌಖಿಕವಾಗಿ ಮಾತುಕತೆ ಆಗಿರುತ್ತದೆ. ನಿ.ಪಿ 1 ಮತ್ತು ನಿ.ಪಿ 2 2016 ರಲ್ಲಿ ನನ್ನ ಸ್ವಾಧೀನಕ್ಕೆ ಬಂದಿರುತ್ತದೆ. ನಿ.ಪಿ 1 ಮತ್ತು ನಿ.ಪಿ 2 ನನ್ನ ಕೈಗೆ ಸಿಗುವಾಗ ಅದರಲ್ಲಿ ಹೆಸರು ಮತ್ತು ದಿನಾಂಕ ನಮೂದಾಗಿರುವುದಿಲ್ಲ, ಮೊತ್ತ ಮತ್ತು ಸಹಿ ಮಾತ್ರ ಮಾಡಲಾಗಿರುತ್ತದೆ. ನಿ.ಪಿ 1 ಮತ್ತು ನಿ.ಪಿ 2 ರ ದಿನಾಂಕ ಹಾಗೂ ಹೆಸರನ್ನು ನಾನೇ ಬರೆದಿರುತ್ತೇನೆ. ನಿ.ಪಿ 1 ಮತ್ತು ನಿ.ಪಿ 2 ನ್ನು ಇಂತಹ ದಿವಸವೇ ನಾನು ನನ್ನ ಹೆಸರನ್ನು ಬರೆದು ಬ್ಯಾಂಕಿಗೆ ಹಾಜರುಪಡಿಸುತ್ತೇನೆ ಎಂದು ಲಿಖಿತವಾಗಿ ತಿಳಿಸಿರುವುದಿಲ್ಲ ಸಾಕ್ಷಿಯು ಮುಂದುವರಿದು ಆರೋಪಿಯ ಜೊತೆ ಮೌಖಿಕವಾಗಿ ಮಾತುಕತೆ ಮಾಡಿದ ಆರೋಪಿಯು ಹೇಳಿದ ನಂತರ ನಿ.ಪಿ 1 ಮತ್ತು ನಿ.ಪಿ 2 ನ್ನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿಯ ಮಾತುಕತೆ ನವೆಂಬರ 2022 ರಂದು ಕದ್ರಿ ಪಾರ್ಕನ ಪಕ್ಕದಲ್ಲಿರುವ Dinky Dine ಪಾರ್ಕಿಂಗ್ ಜಾಗದ ಬಳಿ ಮಾತುಕತೆ ಆಗಿರುತ್ತದೆ. ಆ ಸಮಯದಲ್ಲಿ ನಾನು, ಆರೋಪಿ ಹಾಗೂ ನನ್ನ ಸಿಬ್ಬಂದಿಯಾದ ಆಲಿ ಎಂಬುವರು ಹಾಜರಿದ್ದೆವು. 2019 ರಲ್ಲಿ ನಾನು Bar ನ ಉಸ್ತುವಾರಿಯನ್ನು ಸಹ ಬಿಟ್ಟಿರುತ್ತೇನೆ. 2019 ರಿಂದ ನವೆಂಬರ 2022 ರ ವರೆಗೆ ಕಾನೂನಿನ

This is a True Copy of the Court Records Online. Authenticated @ districts.ecourtsindia.com/cnr/KADK090010222023/truecopy/order-6.pdf

ನೋಟೀಸುಗಳ ಮೂಲಕ ಮಾತುಕತೆಯನ್ನು ಹೊರತುಪಡಿಸಿ ನನ್ನ ಹಾಗೂ ಆರೋಪಿಯ ನಡುವೆ ಬೇರೆ ಮಾತುಕತೆ ಆಗಿರುವುದಿಲ್ಲ. ಸದರಿ ನೋಟೀಸುಗಳಲ್ಲಿ ಆರೋಪಿಯು ಯಾವತ್ತು ಕೂಡ ಆರೋಪಿಯು ನನಗೆ ಹಣ ಕೊಡಲು ಬಾಕಿ ಇದೆ ಎಂದು ಒಪ್ಪಿಕೊಂಡಿರುವುದಿಲ್ಲ. 2022 ರ ಮೀಟಿಂಗ್ ನ ದಿನವೇ ಆರೋಪಿಯ watchmen ಆರೋಪಿಯ ಬಾರ್ ನ ಎದುರು ನನ್ನ ಕಾರನ್ನು ನಿಲ್ಲಿಸಿ ಆರೋಪಿಯ ಜೊತೆ ಮಾತುಕತೆ ಮಾಡಬೇಕು ಎಂದು ಆರೋಪಿಯು ತಿಳಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. Watchmen ತಿಳಿಸಿದ ದಿನವೇ ಮಾತುಕತೆ ಆಗಿರುತ್ತದೆ. ಸದರಿ ದಿನವೇ ಆರೋಪಿಯು ನಿ.ಪಿ 1 ಮತ್ತು ನಿ.ಪಿ 2 ನ್ನು ತುಂಬಿಸಿ ಹಾಜರುಪಡಿಸಿ ಎಂದು ತಿಳಿಸಿರುತ್ತಾರೆ. Dinky Dine ನ ಪಾರ್ಕಿಂಗ್ ನಲ್ಲಿ ಆರೋಪಿಯ ಕಾರಿನ ಒಳಗೆ ಮಾತುಕತೆ ಆಗಿರುತ್ತದೆ. 2019 ರಲ್ಲಿ ನಾನು ಆರೋಪಿಯ ವಿರುದ್ಧ ಮಂಗಳೂರು ಸಿಟಿ ಪೋಲಿಸ ಆಯುಕ್ತರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರಿನ ಮೇಲೆ ಪೊಲೀಸನವರು ಆರೋಪಿಯನ್ನು ಕರೆಸಿ ನನ್ನ ಎದುರೇ ವಿಚಾರಿಸಿರುತ್ತಾರೆ. ಸದರಿ ವಿಚಾರಣೆಯ ವೇಳೆ ಆರೋಪಿಯು ನನಗೆ ದುಡ್ಡು ಕೊಡಬೇಕು ಎಂದು ಯಾವತ್ತೂ ಒಪ್ಪಿಕೊಂಡಿರುವುದಿಲ್ಲ. ತದನಂತರ ಪೊಲೀಸನವರು ಇದು ಸಿವಿಲ್ ವ್ಯಾಜ್ಯ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಕಳುಹಿಸಿರುತ್ತಾರೆ. ಪೊಲೀಸನವರಿಗೆ ನೀಡಿದ ದೂರು, ಆರೋಪಿಯ ಹೇಳಿಕೆ ಹಾಗೂ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಆರೋಪಿಯು ನನ್ನ ವಿರುದ್ಧ ಒಂದು caveat ನ್ನು ದಾಖಲಿಸಿರುತ್ತಾರೆ ಅದು ನನಗೆ ಜಾರಿಯಾಗಿರುತ್ತದೆ. ಸಾಕ್ಷಿಗೆ ಸದರಿ caveat ನ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿ.ಡಿ 1 ಎಂದು ಗುರುತಿಸಲಾಯಿತು. Caveat ದಾಖಲಿಸಿದ ನಂತರ ಆರೋಪಿಗೆ ನೋಟೀಸನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ನಿಖರವಾಗಿ ಯಾವಾಗ ನೋಟೀಸು ಕಳುಹಿಸಿರುತ್ತೇನೆ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರಥಮವಾಗಿ ಆರೋಪಿಯೇ ನನಗೆ ದಿ:30.07.2019 ರಂದು ನೋಟೀಸನ್ನು ಕಳುಹಿಸಿರುತ್ತಾರೆ. ಸಾಕ್ಷಿಯ ಸದರಿ ನೋಟೀಸು ಹಾಗೂ ಅಂಚೆ ರಶೀದಿ, ಅಂಚೆ ಸ್ವೀಕೃತಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲಾತಿಗಳನ್ನು ನಿ.ಡಿ 2 ರಿಂದ ನಿ.ಡಿ 4 ಎಂದು ಗುರುತಿಸಲಾಯಿತು. ನಿ.ಡಿ 2 ರಲ್ಲಿ ಆರೋಪಿಯು ಏನು ನಮೂದಿಸಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ನಿ.ಡಿ 2 ರಲ್ಲಿ ಆರೋಪಿಯು ನನ್ನ ಬಳಿ ರೂ.19,00,000/- ಬಾಕಿ ಬಾಡಿಗೆಯನ್ನು ನೀಡುವಂತೆ ಕೇಳಿರುತ್ತಾರೆ. ನಿ.ಡಿ 2 ಕ್ಕೆ ನಾನು ಮರುಉತ್ತರವನ್ನು ನೀಡಿರುತ್ತೇನೆ. ಸದರಿ ಮರುಉತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸಾಕ್ಷಿಗೆ ಮರುಉತ್ತದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು

This is a True Copy of the Court Records Online. Authenticated @ districts.ecourtsindia.com/cnr/KADK090010222023/truecopy/order-6.pdf

ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿ.ಡಿ 5 ಎಂದು ಗುರುತಿಸಲಾಯಿತು. ಸದರಿ ನಿ.ಡಿ 5 ರ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮಾಹಿತಿಯ ಆಧಾರದ ಮೇಲೆ ವಕೀಲರು ಕಳುಹಿಸಿರುತ್ತಾರೆ. ನಿ.ಡಿ 5 ಕ್ಕೆ ಆರೋಪಿಯು ದಿಃ02.10.2019 ರಂದು ಜವಾಬ್ ನ್ನು ನನಗೆ ಹಾಗೂ ನನ್ನ ವಕೀಲರಿಗೆ ನೀಡಿರುತ್ತಾರೆ. ಸದರಿ ಉತ್ತರದ ಪ್ರತಿ ಹಾಗೂ ಎರಡು ಅಂಚೆ ಸ್ವೀಕೃತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಗಳನ್ನು ನಿ.ಡಿ 6 ರಿಂದ ನಿ.ಪಿ 8 ಎಂದು ಗುರುತಿಸಲಾಯಿತು. ನಿ.ಡಿ 6 ರಲ್ಲಿ ಆರೋಪಿಯು ಏನು ತಿಳಿಸಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ನಿ.ಡಿ 6 ಕ್ಕೆ ಮರುಉತ್ತರವನ್ನು ನೀಡಿರುತ್ತೀನಾ ಎಂದು ನನಗೆ ಗೊತ್ತಿಲ್ಲ, ಒಟ್ಟು ಎರಡು ನೊಟೀಸುಗಳನ್ನು ಕಳುಹಿಸಿರುತ್ತೇನೆ. ನನ್ನ ಪ್ರಕಾರ ನಾನು ವಕೀಲರಾದ ಶ್ರೀ ಮಹೇಶ ರವರ ಮುಖಾಂತರ ನೀಡಿದ ಇನ್ನೊಂದು ನೋಟೀಸು ದಿಃ26.09.2019 ರ ನೋಟೀಸಾಗಿರುತ್ತದೆ. ಸಾಕ್ಷಿಯು ಸದರಿ ನೋಟೀಸನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿ.ಡಿ 9 ಎಂದು ಗುರುತಿಸಲಾಯಿತು. ನನ್ನ ವಿರುದ್ಧ ಆರೋಪಿಯು ಸುಮಾರು 2-3 ಬಾರಿ caveat ನೋಟೀಸನ್ನು ಕಳುಹಿಸಿರಬಹುದು. ಯಾವುದೇ ನೋಟೀಸಲ್ಲಾಗಲೀ ಅಥವಾ ಎಲ್ಲಿಯಾಗಲೀ ಆರೋಪಿ ನನಗೆ ದುಡ್ಡು ಕೊಡಲು ಬಾಕಿ ಇದೆ ಎಂದು ಒಪ್ಪಿಕೊಂಡಿರುವುದಿಲ್ಲ. ಆರೋಪಿಯು ಬಲವಂತದಿಂದ ನನ್ನನ್ನು ನನ್ನ restaurant ನಿಂದ ಆಚೆ ಹಾಕಿರುತ್ತಾರೆ ಎಂದು ಪೊಲೀಸ ಆಯುಕ್ತರಿಗೆ ನೀಡಿದ ದೂರಿನಲ್ಲಿ ನಮೂದಿಸಿರುತ್ತೇನೆ. ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೊರಿರುತ್ತಾರೆ, ಕಾಲಾವಕಾಶ ನೀಡಲಾಯಿತು.)

**ನನ್ನ ಉ. ಲೇ. ತೆ. ನ್ಯಾ . ಬೆ. ಮಾಡಲಾಯ್ತು**

**ಓ ಹೇ ಕೇ ಸರಿ ಇದೆ ಎಂದರು.**

**ಪ್ರ.ದ.ನ್ಯಾ .ದಂ. 5ನೇ ನ್ಯಾ , ಮಂಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KADK090010222023/truecopy/order-6.pdf